ಕೇಳ್ತವ್ನೆ. ಎಲ್ಲಿಂದ ತರಾದು ಅಂತ.. ಪೀಕಲಾಟವಾಗಿದೆ ನಂಗೆ'ಎಂದು ತನ್ನ ಕಷ್ಟ ತೋಡಿಕೊಂಡ.

ಎದುರಿನಿಂದ ವಾರಿಜಕ್ಕ ಬರುತ್ತಿದ್ದವಳು ಇಬ್ಬರನ್ನೂ ನೋಡಿ ನಿಂತಳು.'ಏನ್ರಣ್ಣಾ? ಕೆಲಸ ಜೋರಾ? ಇಬ್ಬರೂ ಸೇರಿ ಕಳ್ಳು ಕುಡಿಯಾಕೆ ಹೊರಟ್ರಾ?'ಎಂದು ಕೇಳಿದಳು. ನಂಜುಂಡ, 'ಎಲ್ಲೀದು ಕನಕ್ಕ. ಕೆಲಸಾನೂ ಇಲ್ಲಾ. ಕಾಸೂ ಇಲ್ಲಾ.. ಅನ್ನಂಗಾಗ್ಯೆತೆ. ಮಗನ ಪರೀಕ್ಷೆಗೆ ಕಟ್ಟಾಕೆ ದುಡ್ಡಿಲ್ಲ. ಇನ್ನ ಕುಡಿಯಾಕೆ ಕಳ್ಳೆಲ್ಲಿಂದ ಬತ್ತದೆ?' ಎಂದು ಸಪ್ಪೆಮುಖ ಮಾಡಿದ. 'ನೀನೇ ಪರವಾಗಿಲ್ಲ ಕನಕ್ಕ. ಸುಖವಾಗಿದೀಯ.. ಮಕ್ಕಳೂ ಓದ್ತವೆ. ಕೈಲಿ ಕಾಸೂ ಓಡಾಡ್ತದೆ. ಮನೇಲೂ ಆರಾಮಾಗ್ಯೆತೆ'ಎಂದ ದೇವಪ್ಪ. 'ಹೌದು.. ಕಷ್ಟಾ ಐತೆ ಅಂದ್ರೆ ನೀವ್ಯಾಕೆ ಒಮ್ಮೆ ಸೋಜಪ್ಪನ ತಾವ ಹೋಗಿ ಮಾತಾಡ್ಬಾರ್ದು? ಕಷ್ಟಾ ಸುಖಾ ಕೇಳ್ತಾರೆ, ದುಡ್ಡು,ಕಾಸು ಕೊಡ್ತಾರೆ'ಎಂದಳು ವಾರಿಜಕ್ಕ. ಇಬ್ಬರೂ ಥಟ್ಟನೆ ಪರಸ್ಪರ ಮುಖ ನೋಡಿಕೊಂಡರು. 'ಕಿರಿಸ್ತಾನರವರಲ್ಲವಾ? ಅವರು ತಮ್ಮ ಧರ್ಮಕ್ಕೆ ಸೇರು ಅಂತಾರಂತೆ' ಎಂದ ನಂಜುಂಡ. ವಾರಿಜಕ್ಕ ತಿರುಗಿ ನಿಂತು, 'ಅದ್ಯಾಕಂತಾರೆ? ಅದು ನಮ್ಮಿಷ್ಟ. ಬೇಕಾದ್ರೆ ಸೇರಬೋದು. ಬ್ಯಾಡಾಂದ್ರೆ ಬಿಡಬೋದು. ನನಗೇನೋ ಇಷ್ಟವಾಯ್ತು... ಸೇರಿದೆ. ಹಂಗಂತ.. ಯಾರಿಗೂ ಒತ್ತಾಯ ಮಾಡಲ್ವಲ್ಲ. ಬಡವರು ನಾವು. ಯಾವ ದೇವರಾದ್ರೇನು? ಒಟ್ಟು ಮ್ಯಾಲಕ್ ಒಬ್ಬ ಅವ್ನೆ. ಅವ್ನು ನಮ್ಮನ್ನೆಲ್ಲಾ ನೋಡ್ಕೋತವ್ನೆ ಅಂದ್ರೆ ಆಯ್ತಪ್ಪ' ಎಂದು ಭಾವಾವೇಶದಿಂದಲೇ ಹೇಳಿದಳು.

'ಮತ್ತೆ... ನೀನೀಗ ಚರ್ಚಿಗೆ ಓಯ್ತೀಯಾ?'ಎಂದು ಕೇಳಿದ ದೇವಪ್ಪ. 'ಊಂ..ಕನಪ್ಪ. ಭಾನುವಾರ ಬೆಳಿಗ್ಗೆ ಚರ್ಚಿಗೆ ಓಯ್ತೀನಿ. 'ಬೈಬಲ್' ಅಂತ ಇಂಗ್ಲಿಸ್ ಪುಸ್ತಕಾ ಕೊಟ್ರು. ನಂಗೆ ಇಂಗ್ಲಿಸು ಬರಲ್ಲಾಂದೆ. ಅದ್ಕೆ, 'ಹೊಸಾ ಒಡಂಬಡಿಕೆ' ಅನ್ನೋ ಕನ್ನಡ ಪುಸ್ತಕಾ ಕೊಟ್ಟವ್ರೆ.. ಓದ್ತೀನಿ. ಸಭೆ, ಸಮಾರಂಭಗಳಿದ್ರೆ ಕರೀತಾರೆ.. ಓಯ್ತೀನಿ. ಅಲ್ಲೆಲ್ಲಾ ನನ್ನ ಮೇರಿ ಅಂತ ಕರೀತಾರೆ. ತಿಂಗಳು ತಿಂಗಳು ಸಾವ್ರ ರುಪಾಯಿ ಕೊಡ್ತಾರೆ. ಮಕ್ಕಳ ಫೀಸು ಕಟ್ಟಿ ಓದಸ್ತವ್ರೆ. ಅವ್ರಿಗೂ ಅದೇನೇನೋ ಇಂಗ್ಲಿಷ್ ಪುಸ್ತಕಾ ಕೊಟ್ಟವ್ರೆ. ಸಾಕಲ್ಲ.. ನಮಗಿನ್ನೇನ್ ಬೇಕು?'ಎಂದಳು. ನಂಜುಂಡ ತುಸು ಹತ್ತಿರ ಬಂದು ಸಣ್ಣ ಧ್ವನಿಯಲ್ಲಿ 'ನಿಂಗೆ.. ನಿಂಗೆ.. ನಮ್ಮ ಗುಡ್ಡದ ಮೇಲಿನ ಗುಡೀರವ್ವನ ಹೆದ್ರಿಕೇನೆ ಇಲ್ವಾ? ಇಂಗ್ ಬ್ಯಾರೇ ಧರ್ಮಕ್ಕ ಹೋದಾವ್ರನ್ನ ಆಕೆ ರಕ್ತ ಕಾರಿ ಸಾಯಂಗ್ ಮಾಡ್ತಾಳಂತೆ'ಎಂದು ಕೇಳಿದ. 'ಅಯ್ಯಪ್ಪಾ.. ಗುಡೀರವ್ವಂಗೆ ಮನ್ಯಾಗೆ ಗುಟ್ಟಾಗಿ ನಮಸ್ಕಾರ ಹಾಕ್ಕಂತೀನಿ. ದಕ್ಷಿಣೆ ಕಾಸೂ ಹಾಕ್ತೀನಿ. ಅದ್ನೂ ಬಿಟ್ಟಿಲ್ಲ. ಇದ್ನೂ ಬಿಟ್ಟಿಲ್ಲ'ಎಂದು ಸಣ್ಣ ಧ್ವನಿಯಲ್ಲೇ ಹೇಳಿ ಕೆನ್ನೆಗೆ ಬಡಿದುಕೊಂಡು ತಪ್ಪು ಹೇಳಿಕೊಂಡಳು. ಇಬ್ಬರಿಗೂ ಥಕ್ಕನೆ ಏನೋ ಹೊಳೆದಂತಾಯಿತು. 'ಅದೋ ನೋಡಿ. ಸೋಜಪ್ಪ ಬತ್ತಾ ಅವ್ರೆ. ಫಾದರ್ ಬರಾಗಂಟ ಇಲ್ಲೆಲ್ಲ ಅವ್ರದೇ ಮಾತು. ಬೇಕಿದ್ರೆ ಅವ್ರ ತಾವ ಏಳಿ'ಎಂದವ್ಳೇ ಸರಸರ ನಡೆದು ಹೋದಳು. ಇಬ್ಬರಿಗೂ ದಿಗಿಲಾಗಿ ಒಂದು ಕ್ಷಣ ಸುಮ್ಮನೆ ನಿಂತರು.

ಅಷ್ಟರಲ್ಲೇ ಸೋಜಪ್ಪ ಹತ್ತಿರ ಬಂದಾಗಿತ್ತು. 'ಓ.. ಏನ್ರಪ್ಪಾ. ಇಬ್ಬರೂ ಯೋಚ್ನೆ ಮಾಡ್ತಾ ನಿಂತಿದೀರಾ? ಏನಾದ್ರೂ ತೊಂದರೆ ಇದೆಯಾ? ನಾವು ದೇವರ ಸೇವಕರು. ನಾವಿರೋದು ಜನರಿಗೆ ಸಹಾಯ ಮಾಡಕ್ಕೆ. ನಿಮಗೆ ಏನಾದ್ರೂ ಸಹಾಯ ಬೇಕಿತ್ತಾ?' ಎಂದು ಮೆಲುನಗುತ್ತ ಕೇಳಿದರು. ಅವರ ನಗೆ ಇವರಿಬ್ಬರಲ್ಲೂ ಧೈರ್ಯ ತುಂಬಿತು. ದೇವಪ್ಪ ಮುಂದಾಗಿ 'ಸೋಜಪ್ಪ.. ಸ್ವಲ್ಪ ದುಡ್ಡು ಕಾಸಿನ ತೊಂದರೆ. ಇನ್ನೆಂಥದ್ದಿರ್ತದೆ? ಇವನ ಮಗಂಗೆ ಐನೂರು ರೂ. ಫೀಸ್ ಕಟ್ಟಬೇಕಿತ್ತು. ನಮ್ಮಪ್ಪಂಗೆ ಔಷಧಿಗೆ ಐನೂರು ಬೇಕಿತ್ತು. ಈಗ ಕೈಲಿ ಕೆಲಸಾ ಬೇರೆ ಇಲ್ವಲ್ಲ. ಕೈ ಓಡ್ತಾ ಇಲ್ಲ. ಎಂಗ್ ಮಾಡಾದು ಅಂತ ಯೋಚನೆ ಮಾಡ್ತಾ ಇದ್ವಿ'ಎಂದು ಹೇಳಿಬಿಟ್ಟ. ಸೋಜಪ್ಪ, 'ಇಷ್ಟೇನಾ? ನಾನೇನೋ ಗುಡ್ಡ ಕಡಕೊಂಡು ತಲೆ ಮೇಲೆ ಬಿದ್ದಿದೆ ಅನ್ಕೊಂಡಿದ್ದೆ. ಬೇಕಿದ್ರೆ ನಾನು ಸಾವಿರ ರೂಪಾಯಿ ಕೊಡ್ತೀನಿ'ಎಂದು ಕಿಸೆಗೆ ಕೈ ಹಾಕಿದರು. ಮತ್ತೆ ಇಬ್ಬರೂ ಪರಸ್ಪರ ಮುಖ ನೋಡಿಕೊಂಡರು. ತಕ್ಷಣ ನಂಜುಂಡ, 'ಆದ್ರೆ.. ಆಮ್ಯಾಕೆ ನೀವು ಧರ್ಮ ಬದ್ಲಾಯ್ಸು.. ಅಂತೀರಂತೆ. ಅದಾಗದು..' ಎಂದು ಒಂದು ಹೆಜ್ಜೆ ಹಿಂದೆ ಸರಿದ. ಕಿಸೆಯಿಂದ ಕೈ ತೆಗೆದ ಸೋಜಪ್ಪ, 'ನಾವೆಲ್ಲ ಮನುಷ್ಯರು ಕಣಪ್ಪ. ಮೊದಲು ಮಾನವ ಧರ್ಮ ನಮ್ಮದು. ನಾವ್ಯಾಕೆ ಹಂಗನ್ನಣಾ? ಅದೆಲ್ಲ ನಿಮ್ಮಿಷ್ಟ. ಏನೋ.. ಸಹಾಯ ಮಾಡಣಾ.. ಅಂತ ಕೇಳ್ದೆ. ಪರವಾಗಿಲ್ಲ ಬಿಡು' ಎಂದು ಹೊರಟರು. ದೇವಪ್ಪ ಅವಸರದಿಂದ ಕೂಗಿ, 'ನಿಲ್ಲಿ ಸೋಜಪ್ಪ. ಸದ್ಯಕ್ಕೆ ದುಡ್ಡು ಕೊಡಿ. ನಾವು ಕೆಲಸಾ ಶುರುವಾಗೋತ್ಲೂ ವಾಪಸ್ಸು ಕೊಟ್ಟುಬಿಡ್ತೀವಿ'ಎಂದ.